KACB610006772025

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಶಿಡ್ಲಘಟ್ಟ**

ದಿನಾಂಕ 5ನೇ ಜೂನ್ 2026

**ಉಪಸ್ಥಿತರು**

**ಶ್ರೀ.ಮಹಮ್ಮದ್ ರೋಷನ್ ಷಾ ಎಂ.ಎ.ಎಲ್.ಎಲ್.ಬಿ.,**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಶಿಡ್ಲಘಟ್ಟ

**ದಂಡ ಪ್ರಕರಣ ಸಂಖ್ಯೆ 232/2025**

ಫಿರ್ಯಾದುದಾರರುಃ ರಾಜ್ಯದ ಪರ ನಗರ ಪೊಲೀಸ್ ಠಾಣೆ, ಶಿಡ್ಲಘಟ್ಟ

**(ಪ್ರತಿನಿಧಿಸುವವರು ಮಾನ್ಯ ಸರ್ಕಾರಿ ಅಭಿಯೋಜಕರು)**

**ವಿರುದ್ದ**

ಆರೋಪಿಗಳು : ತಿಮ್ಮಣ್ಣ ರಾಮಪ್ಪ ಬೂಸಾರೆಡ್ಡಿ ಲೇಟ್ ರಾಮಪ್ಪ
ವಯಸ್ಸು 28 ವರ್ಷ
ವಾರ್ಡ ನಂ 1, ಸಿಆರ್ ಲೇಔಟ್
ಶಿಡ್ಲಘಟ್ಟ ಟೌನ್,ಸೊಣ್ಣಬಾಗಿಲು ತಾಲ್ಲೂಕು
ಬಾಗಲಕೋಟೆ

**(ಪ್ರತಿನಿಧಿಸಿದವರುಃ ಶ್ರೀಎಸ್.ಕೆ.ಎನ್ ವಕೀಲರು)**

**ತೀರ್ಪು**

ಶಿಡ್ಲಘಟ್ಟ ನಗರ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಆರೋಪಿ ವಿರುದ್ದ ಭಾರತೀಯ ನ್ಯಾಯ ಸಂಹಿತೆ ಕಲಂ 85, 115(2), 352 ರಡಿಯಲ್ಲಿ ಈ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನೆಯಂತೆ ಈ ಪ್ರಕರಣದ ಮುಖ್ಯ ಸಾರಾಂಶ ಈ ಕೆಳಕಂಡಂತೆ ಇದೆಃ-**

ಚಾಸಾ 1 ರವರು 2023 ನೇ ಸಾಲಿನ ಅಕ್ಟೋಬರ್ ಮಾಹೆಯಲ್ಲಿ ಓಪನ್ ಮೈಸೂರು ವಿಶ್ವವಿದ್ಯಾಲಯ ಚಿಕ್ಕಬಳ್ಳಾಪುರದಲ್ಲಿ ಬಿಎ ಪದವಿಗೆ ಸೇರಿದ್ದು ಆ

ಸಮಯದಲ್ಲಿ ಚಾಸಾ 1 ರವರಿಗೆ ಆರೋಪಿಯ ಪರಿಚಯವಾಗಿ ಚಾಸಾ 1 ಮತ್ತು ಆರೋಪಿ  ಪರಸ್ಪರ ಪ್ರೀತಿಸಿಕೊಂಡು ನಂತರ ದಿನಾಂಕ 07/08/2024 ರಂದು ಚಾಸಾ 1 ಮತ್ತು ಆರೋಪಿ ಎರಡು ಕುಟುಂಬದವರನ್ನು ಒಪ್ಪಿಸಿ ಮದುವೆಯನ್ನು ಮಾಡಿಕೊಂಡಿದ್ದು ಮದುವೆಯ ಸಮಯದಲ್ಲಿ ಎರಡು ಕುಟುಂಬದವರಿಗೆ ಸಣ್ಣಪುಟ್ಟ ಮನಸ್ತಾಪಗಳು ಸಹ ಬಂದಿದ್ದು. 1ನೇ ಆರೋಪಿಯು ಚಾಸಾ 1 ರವರನ್ನು ಮದುವೆ ಮಾಡಿಕೊಂಡ ದಿನದಿಂದ ಸರಿಯಾಗಿ ಮನೆಗೆ ಹೋಗದೇ ಚಾಸಾ 1 ರವರ ಯೋಗಕ್ಷೇಮವನ್ನು ನೋಡಿಕೊಳ್ಳದೇ ಮನೆಯ ಸಂಸಾರಕ್ಕೆ ಏನನ್ನು ಸಹ ತಂದು ಹಾಕದೇ ಪ್ರತಿದಿನ ಕುಡಿದು ಮನೆಗೆ ಹೋಗಿ ಚಾಸಾ 1ರವರನ್ನು ಕೆಟ್ಟ ಕೆಟ್ಟ ಮಾತುಗಳಿಂದ ಬೈಯ್ಯುವುದು, ನಿನ್ನಿಂದ ನನ್ನ ಜೀವನ ಹಾಳಾಯ್ತು ಎಂದು ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆಯನ್ನು ಕೊಡುವುದು ಮಾಡುತ್ತಿದ್ದು. ಆರೋಪಿಯು ಮದ್ಯಪಾನ ಮಾಡುವ ಹವ್ಯಾಸವಿದ್ದು ಅದಕ್ಕಾಗಿ ಸಾಕಷ್ಟು ಕೈಸಾಲಗಳನ್ನು ಮಾಡಿಕೊಂಡಿದ್ದು ಆ ಸಾಲವನ್ನು ತೀರಿಸಲು ಚಾಸಾ 1 ರವರಿಂದ ಆಗಾಗ ಹಣವನ್ನು ಕೊಡು ಎಂದು ಪೀಡಿಸುತ್ತಿದ್ದು. ಹೀಗಿರುವಾಗ ದಿನಾಂಕ 23/05/2025 ರಂದು ಬೆಳಿಗ್ಗೆ 9.30 ಗಂಟೆ ಸಮಯದಲ್ಲಿ ಚಾಸಾ 1 ರವರು ಆರೋಪಿಯೊಂದಿಗೆ ಸಂಸಾರದ ವಿಚಾರವನ್ನು ಮಾತನಾಡುತ್ತಿದ್ದಾಗ ಆರೋಪಿಯು ಚಾಸಾ 1 ರವರಿಗೆ ನಿನ್ನೊಂದಿಗೆ ಸಂಸಾರ ಮಾಡಲು ಇಷ್ಟ ಇರುವುದಿಲ್ಲ ನಿನ್ನ ಪಾಡಿಗೆ ನೀನು ಇರು, ನನ್ನ ತಂಟೆಗೆ ಬರಬೇಡ ಎಂದು ಕೈಯಿಂದ ಚಾಸಾ 1 ರವರ ಕೆನ್ನೆಗೆ ಹೊಡೆದು ನೋವುಂಟು ಮಾಡಿ ಕೆಲಸಕ್ಕೆ ಹೋಗಿದ್ದು. ಚಾಸಾ 1 ರವರು ತನ್ನ ಗಂಡನ ದೈಹಿಕ ಮತ್ತು ಮಾನಸಿಕ ಹಿಂಸೆಯಿಂದ

ಬೇಸತ್ತು ಮನೆಯಲ್ಲಿದ್ದ Ectotop ಕಂಪನಿಯ Amitraz Dip concentrate ಎಂಬ ಹಸುಗಳ ಇನ್ ಪೆಕ್ಷನ್ ಗೆ ಹಾಕುವ ಔಷದಿಯನ್ನು ಸೇವನೆ ಮಾಡಿ ತನ್ನ ಗಂಡ ಕೆಲಸ ಮಾಡುವ ಸ್ಟೇಷನ್ ಬಳಿ ಹೋಗಿ ಅಸ್ವಸ್ಥಗೊಂಡಿರುತ್ತಾರೆಂದು ಆ ಮೂಲಕ ಆರೋಪಿ ವಿರುದ್ದ ಭಾರತೀಯ ನ್ಯಾಯ ಸಂಹಿತೆ ಕಲಂ 85, 115(2), 352 ರಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ.

3. ತನಿಖಾಧಿಕಾರಿಯು ತನಿಖೆಯನ್ನು ಪೂರ್ಣಗೊಳಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ನಂತರ ಭಾರತೀಯ ನ್ಯಾಯ ಸಂಹಿತೆ ಕಲಂ 85, 115(2), 352 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಕ್ಕಾಗಿ ಸಂಜ್ಞಾವನ್ನು ತೆಗೆದುಕೊಳ್ಳಲಾಯಿತು. ಆರೋಪಿ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ನ್ಯಾಯಾಲಯದ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ.

4. ಭಾರತೀಯ ನಾಗರೀಕ ಸುರಕ್ಷಾ ಸಂಹಿತೆಯ ಕಲಂ 230 ರ ಪ್ರಕಾರ ಆರೋಪಿಗೆ ಪ್ರಕರಣದ ದೋಷಾರೋಪಣಾ ಪಟ್ಟಿಯ ನಕಲನ್ನು ಒದಗಿಸಲಾಯಿತು. ದೋಷಾರೋಪಣೆಯನ್ನು ರಚಿಸಿ ಓದಿ ಹೇಳಲಾಯಿತು. ಆರೋಪಣೆಯನ್ನು ಆರೋಪಿ ಅಲ್ಲಗಳೆದು ವಿಚಾರಣೆಯಾಗಬೇಕೆಂದು ತಿಳಿಸಿದ್ದರ ಮೇರೆಗೆ ಅಭಿಯೋಜನೆಯವರು ಸಾಕ್ಷಿದಾರರುಗಳ ಪೈಕಿ ಸಾಕ್ಷಿದಾರರಾದ ಪ್ರಾಸಾ 1 ರವರನ್ನು ವಿಚಾರಣೆಗೆ ಒಳಪಡಿಸಿದ್ದು ಹಾಗೂ 4 ದಾಖಲಾತಿಗಳನ್ನು ನಿಪಿ 1 ರಿಂದ 5 ಎಂದು ಗುರ್ತಿಸಿಕೊಂಡಿರುತ್ತಾರೆ.

5. ಅಭಿಯೋಜನೆಯವರ ಪರ ಮಾಡಿದ ಸಾಕ್ಷಿದಾರರಾದ ಪ್ರಾಸಾ 1 ರವರು ದೂರುದಾರರು, ಗಾಯಾಳು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ್ಯ ನುಡಿದಿರುವುದರಿಂದ ಹಾಗೂ ಅವರ ಸಾಕ್ಷ್ಯದಲ್ಲಿ ಆರೋಪಿ ವಿರುದ್ದ ಯಾವುದೇ ಸಾಕ್ಷ್ಯಾದಾರಗಳು ಕಂಡುಬರದೇ ಇದ್ದುದರಿಂದ ಉಳಿದ ಸಾಕ್ಷಿಗಳಿಗೆ ಸಮನ್ಸ್ ಜಾರಿಗೊಳಿಸಬೇಕೆಂಬ ಅಭಿಯೋಜನೆಯವರ ಕೋರಿಕೆಯನ್ನು ತಿರಸ್ಕರಿಸಲಾಯಿತು. ಆರೋಪಿಗಳ ವಿರುದ್ದ ಯಾವುದೇ ಸಾಕ್ಷ್ಯವಿಲ್ಲದೇ ಇರುವುದರಿಂದ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆಯ ಕಲಂ 351 ರಡಿಯಲ್ಲಿ ಆರೋಪಿ ಹೇಳಿಕೆಯನ್ನು ಕೈಬಿಡಲಾಯಿತು.

6. ವಾದವನ್ನು ಕೇಳಲಾಯಿತು ಮತ್ತು ದಾಖಲೆಗಳನ್ನು ಪರಿಶೀಲಿಸಲಾಯಿತು.

**7.** ಮೇಲ್ಕಂಡ ಸಂಗತಿಗಳಿಂದ ಕೆಳಕಂಡ ಅಂಶಗಳು ನನ್ನ ಪರಿಗಣನೆಗೆ ಬಂದಿರುತ್ತದೆ.

1. **ಚಾಸಾ 1 ರವರು 2023 ನೇ ಸಾಲಿನ ಅಕ್ಟೋಬರ್ ಮಾಹೆಯಲ್ಲಿ ಒಪನ್ ಮೈಸೂರು ವಿಶ್ವವಿದ್ಯಾಲಯದ ಚಿಕ್ಕಬಳ್ಳಾಪುರದಲ್ಲಿ ಬಿಎ ಪದವಿಗೆ ಸೇರಿದ್ದು ಆ ಸಮಯದಲ್ಲಿ ಚಾಸಾ 1 ರವರಿಗೆ 1ನೇ ಆರೋಪಿಯು ಪರಿಚಯವಾಗಿ ಪರಸ್ಪರ ಪ್ರೀತಿಸಿ ಮದುವೆಯಾಗಿದ್ದು. ದಿನಾಂಕ 07/08/2024 ರಂದು ಚಾಸಾ 1 ಮತ್ತು ಆರೋಪಿ ಕುಟುಂಬದವರನ್ನು ಒಪ್ಪಿಸಿ ಮದುವೆಯನ್ನು**

ಮಾಡಿಕೊಂಡಿದ್ದು ಮದುವೆ ಸಮಯದಲ್ಲಿ ಎರಡು ಕುಟುಂಬದವರಿಗೆ ಸಣ್ಣಪುಟ್ಟ ಮನಸ್ತಾಪಗಳು ಬಂದಿದ್ದು. ಆರೋಪಿಯಾದ ನೀವು ಚಾಸಾ 1 ರವರನ್ನು ಮದುವೆ ಮಾಡಿಕೊಂಡ ದಿನದಿಂದ ಸರಿಯಾಗಿ ಮನೆಗೆ ಹೋಗದೇ ಅವರ ಯೋಗಕ್ಷೇಮವನ್ನು ನೋಡಿಕೊಳ್ಳದೇ ಮನೆಯ ಸಂಸಾರಕ್ಕೆ ಏನನ್ನು ಸಹ ತಂದು ಹಾಕದೇ ಪ್ರತಿದಿನ ಕುಡಿದು ಮನೆಗೆ ಹೋಗಿ ಚಾಸಾ 1 ರವರನ್ನು ಕೆಟ್ಟ ಮಾತುಗಳಿಂದ ಬೈದಿದ್ದು ಅಚಾಚ್ಯ ಶಬ್ಧಗಳಿಂದ ಬೈದು ಜಗಳ ತೆಗೆದಿದ್ದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ 352 ರ ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರ ುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುವರೇ?

2. ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ ಸಮಯ ಹಾಗೂ ಸ್ಥಳದಲ್ಲಿ ಮೇಲೆ ಹೇಳಿದ ದಿನಾಂಕ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ನಿನ್ನಿಂದ ಜೀವನ ಹಾಳಾಯ್ತು ಎಂದು ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆ ಕೊಡುತ್ತಿದ್ದು. ಚಾಸಾ 1 ರವರು ತನ್ನ ಗಂಡನ ದೈಹಿಕ ಮತ್ತು ಮಾನಸಿಕ ಹಿಂಸೆಯಿಂದ ಬೇಸತ್ತು ಮನೆಯಲ್ಲಿದ್ದ Ectotop ಕಂಪನಿಯ Amitraz Dip concentrate ಎಂಬ ಹಸುಗಳ ಇನ್ ಪೆಕ್ಷನ್ ಗೆ ಹಾಕುವ ಔಷದಿಯನ್ನು ಸೇವನೆ ಮಾಡಿದ್ದು ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ 85 ರ ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರ

**ುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುವರೇ?**

3. **ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ ಸಮಯ ಹಾಗೂ ಸ್ಥಳದಲ್ಲಿ ಆರೋಪಿ ದಿನಾಂಕ 23/02/2025 ರಂದು ಬೆಳಿಗ್ಗೆ 9.30 ಗಂಟೆ ಸಮಯದಲ್ಲಿ ಚಾಸಾ 1 ರವರು ನಿಮ್ಮೊಂದಿಗೆ ಸಂಸಾರದ ವಿಚಾರವನ್ನು ಮಾತನಾಡುತ್ತಿದ್ದಾಗ ಆರೋಪಿಯಾದ ನೀವು ಚಾಸಾ 1 ರವರ ಕೆನ್ನೆಗೆ ಹೊಡೆದು ನೋವುಂಟು ಮಾಡಿದ್ದು ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ 115(2) ಸಹವಾಚಕ ಕಲಂ 190 ರ ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುವರೇ?**

4. **ಯಾವ ಆದೇಶ?**

**8**. ನ್ಯಾಯಾಲಯದ ಮುಂದೆ ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಗಳ ಆಧಾರದ ಮೇಲೆ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತೇನೆ.

ಅಂಶ 1 ರಿಂದ 3: **ನಕಾರಾತ್ಮಕವಾಗಿ**

ಅಂಶ 4 ಃ ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ

## ಕಾರಣಗಳು

9. **ಅಂಶ 1 ರಿಂದ 3:-** ಈ ಅಂಶಗಳು ಒಂದಕ್ಕೊಂದು ಹೊಂದಿಕೊಂಡಿರುವುದರಿಂದ ಮತ್ತು ಪುನರಾವರ್ತವನೆಯನ್ನು ತಪ್ಪಿಸುವ ಉದ್ದೇಶದಿಂದ ಅವುಗಳನ್ನು ಒಟ್ಟಿಗೆ ವಿಮರ್ಶೆಗೆ ತೆಗೆದುಕೊಳ್ಳಲಾಗಿದೆ.

10. ಅಭಿಯೋಜನೆಯವರು ಆರೋಪಿ ವಿರುದ್ದ ಹೊರಿಸಿರುವ ಆಪಾದನೆಯನ್ನು ಸಾಬೀತುಪಡಿಸುವ ಸಲುವಾಗಿ ಪ್ರಾಸಾ 1 ರವರನ್ನು ವಿಚಾರಣೆಗೆ ಒಳಪಡಿಸಿದ್ದು ನಿಪಿ 1 ರಿಂದ 5 ನ್ನು ಗುರುತಿಸಿಕೊಂಡಿರುತ್ತಾರೆ. ಚಾಸಾ 1 ರವರನ್ನು ಪ್ರಾಸಾ 1 ಆಗಿ ವಿಚಾರಣೆಗೆ ಒಳಪಡಿಸಿದ್ದು ಆರೋಪಿಗೂ ತಮಗೂ ಬಾಯಿಮಾತಿನ ಜಗಳವಾಗಿದ್ದು , ಈ ಸಂಬಂಧ ತಾವು ಪೊಲೀಸ್ ಠಾಣೆಗೆ ಹೋಗಿ ಸಹಿಯನ್ನು ಹಾಕಿದ್ದು ಅದರಲ್ಲಿ ಏನು ವಿಚಾರ ಬರೆದಿದ್ದಾರೆ ಎಂಬುದು ಗೊತ್ತಿಲ್ಲ ಎಂದು ನಿಪಿ1 ದೂರನ್ನು ಗುರುತಿಸಿದ್ದು. ಆರೋಪಿ ತನಗೆ ದೈಹಿಕ ಹಾಗೂ ಮಾನಸಿಕ ಕಿರುಕುಳ ಕೊಟ್ಟಿಲ್ಲ, ಹಲ್ಲೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದು ಪ್ರತಿಕೂಲ ಸಾಕ್ಷವನ್ನು ನುಡಿದಿರುತ್ತಾರೆ. ಸದರಿ ಸಾಕ್ಷಿಯನ್ನು ಅಭಿಯೋಜನೆಯವರು ಪಾಟೀ ಸವಾಲಿಗೆ ಒಳಪಡಿಸಿ ಘಟನೆಯ ಕುರಿತು ಸೂಚಿಸಿದ್ದರೂ ಕೂಡ ನಿರಾಕರಿಸಿದ್ದು ಯಾವುದೇ ಪೂರಕ ಸಾಕ್ಷ್ಯ ನುಡಿದಿಲ್ಲ.

11. ಈ ಪ್ರಕರಣದಲ್ಲಿ ಪ್ರತ್ಯಕ್ಷ ಹಾಗೂ ಗಾಯಾಳು ಸಾಕ್ಷಿಯಾದ ಚಾಸಾ 1 ರವರು ಯಾವುದೇ ಪೂರಕವಾದ ಸಾಕ್ಷ್ಯವನ್ನು ನುಡಿದಿರುವುದಿಲ್ಲ ಹಾಗೂ ಪ್ರತಿಕೂಲ ಸಾಕ್ಷಿದಾರರಾಗಿರುತ್ತಾರೆ. ಆ ಕಾರಣದಿಂದ ಸದರಿ ಮೇಲೆ ಹೇಳಿದ ಸಾಕ್ಷಿಯ ಸಾಕ್ಷ್ಯಾಂಶವು ಆರೋಪಿ ವಿರುದ್ದ ಹೊರಿಸಲಾದ ಆರೋಪಗಳ ಸಾಭೀತಿಗೆ ಪೂರಕವಾಗಿ ಕಂಡುಬಂದಿರುವುದಿಲ್ಲ. ಅಭಿಯೋಜನೆಯವರು ಉಳಿದ ದೋಷಾರೋಪಣಾ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸುವಂತೆ ಕೋರಿಕೊಂಡಿದ್ದು, ಉಳಿದ ಸಾಕ್ಷಿದಾರರಾದ

ತನಿಖಾಧಿಕಾರಿ ಮತ್ತು ಇತರೆ ಸಾಕ್ಷ್ಯಗಳ ವಿಚಾರಣೆ ಮಾಡುವುದರಿಂದ ಯಾವುದೇ ಪೂರಕ ಪ್ರಯೋಜನವಿಲ್ಲದ ಕಾರಣ ಅಭಿಯೋಜನೆಯವರ ಈ ಅಹವಾಲನ್ನು ತಿರಸ್ಕರಿಸಲಾಯಿತು ಮತ್ತು ಇತರೆ ಸಾಕ್ಷಿದಾರರ ವಿಚಾರಣೆಯನ್ನು ಕೈಬಿಡಲಾಗಿರುತ್ತದೆ. ಆದ್ದರಿಂದ ಅಭಿಯೋಜನೆಯವರು ಆರೋಪಿಗಳ ಮೇಲೆ ಆರೋಪಿಸಿರುವ ಆರೋಪಗಳನ್ನು ಸಾಭೀತುಪಡಿಸಲು ವಿಫಲವಾಗಿದೆ ಎಂದು ಪರಿಗಣಿಸಿ ಅಂಶ 1 ರಿಂದ 3 ನ್ನು **ನಕಾರಾತ್ಮಕವಾಗಿ ಉತ್ತರಿಸಲಾಗಿದೆ.**

12. **ಅಂಶ ಸಂಖ್ಯೆ: 4:** ಈ ಮೇಲೆ ಹೇಳಿರುವ ಕಾರಣಗಳಿಗಾಗಿ ತಲುಪಿರುವ ತೀರ್ಮಾನ ಮತ್ತು ಅಭಿಪ್ರಾಯಗಳಿಗೆ ಅನುಗುಣವಾಗಿ ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ

**ಭಾರತೀಯ ನಾಗರೀಕ ಸುರಕ್ಷ ಸಂಹಿತೆ ಕಲಂ 271(1) ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿ ವಿರುದ್ದ ಭಾರತೀಯ ನ್ಯಾಯ ಸಂಹಿತೆ 85, 115(2), 352 ರಡಿಯಲ್ಲಿ ಹೊರೆಸಿರುವ ಆಪಾದನೆಗಳಿಂದ ಸದರಿ ಆರೋಪಿಯನ್ನು ದೋಷಮುಕ್ತರೆಂದು ಘೋಷಿಸಿ ಬಿಡುಗಡೆ ಮಾಡಲಾಗಿದೆ.**

**ಆರೋಪಿ ಹಾಗೂ ಅವರ ಜಾಮೀನುದಾರರು ಬರೆದುಕೊಟ್ಟ ಜಾಮೀನು ಮುಚ್ಚಳಿಕೆ ಪತ್ರಗಳು ಅಪೀಲಿನ ಅವಧಿ ಮುಗಿದ ನಂತರ ರದ್ದುಗೊಳ್ಳತಕ್ಕದ್ದು.**

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮುಖಾಂತರ ಬೆರಳಚ್ಚು ಪಡಿಸಿದ್ದು ನಂತರ ತಪ್ಪುಗಳನ್ನು ತಿದ್ದಿ ತೆರೆದ ನ್ಯಾಯಾಲಯದಲ್ಲಿ ದಿನಾಂಕ: 05/06/2026 ರಂದು ಓದಲಾಯಿತು.)

MOHAMMED ROSHAN SHA
Digitally signed by MOHAMMED ROSHAN SHA
Date: 2026.06.10 11:41:26 +0530

**(ಮಹಮ್ಮದ್ ರೋಷನ್ ಷಾ)**
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ, ಶಿಡ್ಲಘಟ್ಟ**

**<u>ಅನುಬಂಧ</u>**

**<u>ಅಭಿಯೋಜನೆಯ ಪರ ವಿಚಾರಣೆಯಾದ ಸಾಕ್ಷಿದಾರರ ಪಟ್ಟಿಃ</u>**

ಪ್ರಾಸಾ1: ಶಿರಿಷಾ

**<u>ಅಭಿಯೋಜನೆಯ ಪರ ಗುರುತಿಸಿದ ದಾಖಲಾತಿಗಳ ಪಟ್ಟಿ.</u>**

ನಿಪಿಃ1 : ದೂರು

ನಿಪಿಃ2 : ಮಹಜರ್

ನಿಪಿಃ3 : ಅಮಾನತ್ತು ಮಹಜರ್

ನಿಪಿಃ 4 ಮತ್ತು 5: ಛಾಯಾಚಿತ್ರಗಳು

**<u>ಆರೋಪಿಗಳ ಪರ ವಿಚಾರಣೆಯಾದ ಸಾಕ್ಷಿಗಳು:</u>** <u>-ಇಲ್ಲ -</u>

**<u>ಆರೋಪಿಗಳ ಪರ ಗುರುತಿಸಿದ ದಾಖಲೆಗಳುಃ</u>** <u>-ಇಲ್ಲ-</u>

**<u>ಅಭಿಯೋಜನೆಯ ಪರ ಗುರುತಿಸಿದ ಮುದ್ದೆ ಮಾಲುಗಳುಃ</u>** <u>-ಇಲ್ಲ-</u>

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ, ಶಿಡ್ಲಘಟ್ಟ**